# SPECIMEN

## ಕ್ರಡ್ಡಾಂತು ಕನ್ನಡ ಭಾಷಾ ಪರೀಕ್ಷೆ

### SECTION — A / ವಿಭಾಗ — A

1. **ಈ ಕೆಳಗಿನ ವಿಷಯವನ್ನು ಕುರಿತು 300 ಶಬ್ದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** **[25]**

ಹಳೆಯ ಸಂಸ್ಕೃತಿಯ ಅಳಿವು–ಉಳಿವು.

SPECIMEN

2. ಕೆಳಗಿನ ಕಥಾಭಾಗವನ್ನು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ.

ವಿವೇಕಾನಂದರೆಂದರೆ ಸಾಮಾಜಿಕ ಸಂಕಟ, ಸಿಟ್ಟು, ಸ್ಪಷ್ಟತೆಗಳ ರೂಪಕ. ಅವರು ಶಿಖರ ಚಿಂತಕ. ಅವರ ಆಲೋಚನೆಯಲ್ಲಿ ಗೊಂದಲಗಳಿಲ್ಲ, ಕೆಲವೊಮ್ಮೆ ವೈರುದ್ಧ್ಯದಂತೆ ಕಂಡರೂ ಅದು ಸಾಂದರ್ಭಿಕ ಪ್ರತಿಕ್ರಿಯೆಗಳ ಫಲ. ಅವರ ಎಲ್ಲಾ ವಿಚಾರಗಳನ್ನು ಒಟ್ಟಿಗೆ ನೋಡಿದಾಗ ಸ್ಪಷ್ಟ ನೋಟ ಕಾಣಿಸುತ್ತದೆ.

ದೈಹಿಕ ಹಸಿವನ್ನು ಹಿಂಗಿಸುವುದು ಅವರ ಮೊದಲ ಆದ್ಯತೆ ; ಆತ್ಮದ ಹಸಿವು, ವೇದಾಂತದ ಹಸಿವು, ಸಾಂಸ್ಥಿಕವಾದ ಧರ್ಮದ ಹಸಿವು, ಈ ಕಾರಣದಿಂದಾಗಿಯೇ ವಿವೇಕಾನಂದರು ಯಾವತ್ತೂ ಧಾರ್ಮಿಕ ಮೂಲಭೂತವಾದಿಯಾಗಿರಲಿಲ್ಲ. ಬದಲಾಗಿ ಧಾರ್ಮಿಕ ಮೂಲಭೂತವಾದಕ್ಕೆ ಉಗ್ರ ವಿರೋಧಿಯಾಗಿದ್ದರು. ಜಾತಿವಾದ ಮತ್ತು ಕೋಮುವಾದಕ್ಕೆ ಪ್ರತಿರೋಧವೊಡ್ಡಿದ್ದರು. ಹಿಂದೂ ಧರ್ಮದೊಳಗಿದ್ದೂ ಅದನ್ನು ಮೀರಿದ ಸಾಮಾಜಿಕ ಶಕ್ತಿಯಾದರು. ಆದ್ದರಿಂದ ಇಂದಿನ ಸನ್ನಿವೇಶದಲ್ಲಿ ಅವರು ಹೆಚ್ಚು ಪ್ರಸ್ತುತರು. ಈ ಅಂಶವನ್ನು ಮುಂದಿನಂತೆ ಮತ್ತಷ್ಟು ವಿವರಿಸಬಹುದು ; ಇಂದು ಜಾತಿವಾದ ಮತ್ತು ಕೋಮುವಾದಗಳು ಮುನ್ನೆಲೆಗೆ ಬಂದು ಮಾನವೀಯ ಮೌಲ್ಯವನ್ನು ನುಂಗಿ ನೊಣೆಯುತ್ತಿವೆ. ಸಮಾನತೆಯ ಆಶಯಗಳನ್ನು ತಪ್ಪಿತಸ್ಥ ಶಾಲಾ ಬಾಲಕರಂತೆ ಹಿಂದಿನ ಸಾಲಿನಲ್ಲಿ ಕೈಕಟ್ಟಿ ನಿಲ್ಲಿಸಲಾಗಿದೆ. ಬಡಜನರ ಪರವಾದ ಆದ್ಯತೆಗಳು ಪಲ್ಲಟಗೊಳ್ಳುತ್ತಿವೆ. ವಿವೇಕಾನಂದರಿಗೆ ಬಡಜನರ ಹೊಟ್ಟೆ ಹಸಿವನ್ನು ಹಿಂಗಿಸುವುದು ಮೊದಲ ಆದ್ಯತೆಯಾಗಿತ್ತು. ಆನಂತರ ಧರ್ಮ, ಜಾತಿವಾದದ ವಿಷಯಕ್ಕೆ ಬಂದರೆ ಹಿಂದುಳಿದ ಹಾಗೂ ದಲಿತ ಜಾತಿಗಳ ಬಗ್ಗೆ ಅವರಿಗೆ ಸಹಜವಾದ ಸಾಮಾಜಿಕ ಕಳಕಳಿಯಿತ್ತು. ಹೀಗಾಗಿಯೇ ಅವರು ಸಂಶಯಕ್ಕೆಡೆಯಿಲ್ಲದಂತೆ ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸಿದರು. ಅವರು ‘‘ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲಾ ತುಂಬಿದೆ’’ ಎಂದು ಹೇಳಿದರು. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿ ಶೂದ್ರರು, ಅಸ್ಪೃಶ್ಯರು ಸ್ವಾತಂತ್ರ್ಯ ಹೀನರಾಗಿ ಗುಲಾಮತನ ಅನುಭವಿಸುವುದನ್ನು ಟೀಕಿಸುವ ವಿವೇಕಾನಂದರು ಶೂದ್ರವರ್ಗ ತನ್ನ ಊಳಿಗ ಸ್ವಭಾವವನ್ನು ಬಿಟ್ಟು ಹೊರಬರಬೇಕೆಂದು ಕರೆಕೊಡುತ್ತಾರೆ. ಮುಂದೊಮ್ಮೆ ಶೂದ್ರರು ತಮ್ಮ ಶೂದ್ರತ್ವದ ಶಕ್ತಿಯಿಂದಲೇ ಮೇಲೇಳುವ ಕಾಲ ಬರುತ್ತದೆ ಎಂದು ಭಾವಿಸುತ್ತಾರೆ ಮತ್ತು ವಿಶೇಷವೆಂದರೆ, ಮುಂದೆ ಬರುವುದು ‘‘ಸಮತವಾದ, ಅರಾಜಕವಾದ, ಶೂನ್ಯವಾದಗಳು ಮುಂದಾಗಲಿರುವ ಸಮಾಜ ಕ್ರಾಂತಿಯ ಅರುಣೋದಯ’’ ಎಂದು ಘೋಷಿಸಿದ್ದಾರೆ.

# SPECIMEN

ಕೋಮುವಾದದ ವಿಷಯಕ್ಕೆ ಬಂದರೆ ವಿವೇಕಾನಂದರೆಂದೂ ಏಕಸಂಸ್ಕೃತಿ ಮತ್ತು ಏಕಧರ್ಮ ವಿಸ್ತರಣೆಗಳ ಪರವಾಗಿರಲಿಲ್ಲ. ಅದು ಹಿಂದೂ ಧರ್ಮವಿರಲಿ, ಕ್ರೈಸ್ತ ಧರ್ಮವಿರಲಿ, ಇಸ್ಲಾಂ ಧರ್ಮವಿರಲಿ, ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆಯು ಜೀವ ವಿರೋಧವೆಂದು ಅವರು ಭಾವಿಸಿದ್ದರು ; 11-09-1893ರಂದು ಚಿಕಾಗೊದ ಸರ್ವಧರ್ಮ ಸಮ್ಮೇಳನದಲ್ಲಿ ಮಾತನಾಡುತ್ತ ಅವರು 'ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರೆಯುತ್ತಿತ್ತು ಎಂದರು'. ಇನ್ನೊಮ್ಮೆ ಅವರು ಹೀಗೆ ಹೇಳಿದರು; "ಪ್ರತಿಯೊಬ್ಬರೂ ಒಂದೇ ಮಾರ್ಗವನ್ನು ಅನುಸರಿಸುವ ದುರ್ದಿನ ಪ್ರಪಂಚಕ್ಕೆ ಬಾರದಿರಲಿ. ಈಗ ಧರ್ಮ ಮತ್ತು ಆಧ್ಯಾತ್ಮಿಕ ಭಾವನೆ ನಾಶವಾಗುವುದು. ವೈವಿಧ್ಯವೇ ಜೀವನದ ರಹಸ್ಯ.... ನಾವು ಎಲ್ಲ ಧರ್ಮಗಳಿಗೂ ಗೌರವವನ್ನು ತೋರಬೇಕು."

ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದ ವಿರೋಧಿಯಾಗಿದ್ದರೆಂದು ತಿಳಿದು ಬರುತ್ತದೆ. ಕೋಮುವಾದವು ಏಕಧರ್ಮ ಮತ್ತು ಏಕ ಸಂಸ್ಕೃತಿಯೇ ಶ್ರೇಷ್ಠವೆಂದೂ ಅದೇ ಅಂತಿಮವೆಂದೂ ನಂಬುತ್ತಾ, ಪರಮಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ. ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು. ಕುವೆಂಪು ಅವರು ಹೇಳುವಂತೆ ಅವರು 'ಮಾನವತಾ ಮಿತ್ರರಾಗಿದ್ದರು. ಮನುಷ್ಯತ್ವದ ಮಹಿಮೆಯನ್ನು ಎಂದಿಗೂ ಮರೆಯಬೇಡಿ. ನಮಗಿಂತಲೂ ಬೇರೆಯಾದ ದೇವರು ಹಿಂದೆ ಇರಲಿಲ್ಲ. ಮುಂದೆ ಬರುವುದಿಲ್ಲ. ಕ್ರೈಸ್ತ, ಬುದ್ಧ, ಕೃಷ್ಣ, ರಾಮರೆಲ್ಲಾ ಅಹಮಸ್ಮಿ ಎಂಬ ಮಹಾವಾರಿಧಿಯ ತರಂಗಗಳು ಮಾತ್ರ' ಎಂದು ಘೋಷಿಸಿದರು.

ವಿವೇಕಾನಂದರ 'ಧೀರೋದಾತ್ತ' ನಿಲುವುಗಳು ವೈಯಕ್ತಿಕ ಮಾತ್ರವಾಗದೆ ಸಾಮಾಜಿಕವಾಗಿ ರೂಪಾಂತರಗೊಂಡು ಗಟ್ಟಿಯಾದದ್ದೇ ಅವರ ವ್ಯಕ್ತಿತ್ವದ ವಿಶೇಷ : ಅವರದು ಪ್ರಖರ ಸಾಮಾಜಿಕ ವ್ಯಕ್ತಿತ್ವ. ದೀನದಲಿತರ ಉದ್ಧಾರವೇ ಅವರ ಧರ್ಮದ ಮೊದಲ ತತ್ವ ; ಅದೇ ಅವರ ವೈಚಾರಿಕ ಸತ್ವ. ಆದ್ದರಿಂದ ವಿವೇಕಾನಂದರು ಇಂದಿಗೂ ಸತ್ಯ.

# SPECIMEN

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. [5 × 5 = 25]

**(a)** ಸ್ವಾಮಿ ವಿವೇಕಾನಂದರ ಮೊದಲ ಆದ್ಯತೆ ಏನು?

ಉತ್ತರ: ______________________________

______________________________

______________________________

**(b)** ಸ್ವಾಮಿ ವಿವೇಕಾನಂದರ ವಿಚಾರಗಳ ಆಶಯವೇನು?

ಉತ್ತರ: ______________________________

______________________________

______________________________

______________________________

**(c)** 'ಸಮಾಜ ಕ್ರಾಂತಿಯ ಅರುಣೋದಯ' ಈ ಉಕ್ತಿಯ ಮರ್ಮವೇನು?

ಉತ್ತರ: ______________________________

______________________________

______________________________

**(d)** ಸ್ವಾಮಿ ವಿವೇಕಾನಂದರು ಯಾವುದರ ವಿರೋಧಿಯಾಗಿದ್ದರು?

ಉತ್ತರ: ______________________________

______________________________

______________________________

**(e)** ಒಟ್ಟಾರೆ ವಿವೇಕಾನಂದರ ವಿಚಾರಗಳ ಪ್ರಸ್ತುತತೆಯನ್ನು ಕುರಿತು ಬರೆಯುರಿ.

ಉತ್ತರ: ______________________________

______________________________

______________________________

SPECIMEN

3. ಸಂಕ್ಷಿಪ್ತ ಲೇಖನ (**Précis Writing**)

**ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ.** **[25]**

ಯೋಜನೆಯ ಅಗತ್ಯವು ಇಂದಿನಷ್ಟು ಹಿಂದೆಂದೂ ಜರೂರಿನದ್ದು ಆಗಿರಲಿಲ್ಲ. ಆಧುನಿಕ ಬದುಕಿನ ಎಲ್ಲಾ ರಂಗಗಳಿಗೂ ಇದು ಅನ್ವಯಿಸುತ್ತದೆ. ನಿಸ್ಸಂದೇಹವಾಗಿ ಇದು ಸಹಜವಾದುದು. ಇಡೀ ಮಾನವ ಜನಾಂಗವು ಉತ್ತಮ ನಾಳೆಯನ್ನು ಹೊಂದುವುದಕ್ಕಾಗಿ ಜೀವನ ಮಟ್ಟವನ್ನು ಮೇಲೆತ್ತುವ ಕಾಯಕದಲ್ಲಿ ತೊಡಗಿಕೊಂಡಿರುವಾಗ, ಇಂದಿನ ಜಗತ್ತಿನಲ್ಲಿ ಬಹುವಿಧವಾದ ಬೇಡಿಕೆಗಳ ಕಾರಣದಿಂದಾಗಿ ಲಭ್ಯವಿರುವ ಸಂಪನ್ಮೂಲಗಳ ಕೊರತೆ ಉಂಟಾಗುತ್ತದೆ. ಆದ್ದರಿಂದ ಲಭ್ಯವಿರುವ ಸಂಪನ್ಮೂಲಗಳ ಗರಿಷ್ಠ ಬಳಕೆಯು ಯೋಜನೆಯ ಪ್ರಥಮ ಮತ್ತು ಪ್ರಧಾನವಾದ ಉದ್ದೇಶವೆಂದು ಹೇಳುವುದು ಸಮಂಜಸವಾದುದು. ಈ ಹಿನ್ನೆಲೆಯಲ್ಲಿ ದೇಶದ ಅಂಚೆ ಸೌಲಭ್ಯಗಳ ಯೋಜನೆಯ ಕುರಿತಂತೆ ಕೆಲವು ಅವಲೋಕನಗಳನ್ನು ಇಲ್ಲಿ ಮಾಡಲಾಗಿದೆ.

1947ರಲ್ಲಿ ನಮ್ಮ ದೇಶವು ಸ್ವತಂತ್ರವಾಯಿತು. ನಂತರ ಕ್ರಮೇಣ ಹೊಸ ಅಂಚೆ ಕಚೇರಿಗಳನ್ನು ಒಂದೊಂದಾಗಿ ತೆರೆಯಲು ಆರಂಭಿಸಿದರು. ಈ ನೂತನ ಪ್ರಯೋಗದಿಂದ ದೈನಂದಿನ ಕಾರ್ಯನೀತಿಯಲ್ಲಿ ಮಹತ್ತರ ಬದಲಾವಣೆಗಳು ತನ್ನಿಂದ ತಾನೇ ಆಗ ತೊಡಗಿದವು. ಅದಕ್ಕಿಂತ ಮೊದಲು ಬ್ರಿಟಿಷ್ ಸರಕಾರಕ್ಕೆ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಆಸಕ್ತಿ ತೋರಿಸಿರಲಿಲ್ಲ. ಹೀಗಾಗಿ ಹೊಸ ಅಂಚೆ ಕಚೇರಿಗಳನ್ನು ತೆರೆಯುವುದು ಆಡಳಿತದ ಒಂದು ಭಾಗವೆಂದು ಬ್ರಿಟಿಷರು ಭಾವಿಸಿರಲಿಲ್ಲ. ದೇಶದ ಮೇಲೆ ತನ್ನ ಹಿಡಿತವನ್ನು ಉಳಿಸಿಕೊಳ್ಳಲು ತಮಗೆ ಅಗತ್ಯವಾದುದನ್ನು ಮಾತ್ರ ಜಾರಿಗೆ ತಂದು ಉಳಿದವುಗಳ ಬಗ್ಗೆ ಅದು ತಲೆ ಕೆಡಿಸಿಕೊಳ್ಳಲಿಲ್ಲ. ಹೀಗಾಗಿ ಸ್ವಾತಂತ್ರ್ಯ ನಂತರ ಅಸ್ತಿತ್ವಕ್ಕೆ ಬಂದ ನೂತನ ಸರಕಾರವು ಆದ್ಯತೆಯ ಮೇಲೆ ದೊಡ್ಡ ಸಂಖ್ಯೆಯಲ್ಲಿ ಅಂಚೆ ಕಚೇರಿಗಳನ್ನು ತೆರೆಯಲು ಆರಂಭಿಸಿತ್ತು. ಕಾಲಕ್ರಮೇಣ ದೈತ್ಯರೂಪದಲ್ಲಿ ಬೆಳೆದು ಇಂದು ಕೇಂದ್ರ ಸರಕಾರದ ಬಹುಬೇಡಿಕೆಯ ಮತ್ತು ಜನಪರವಾದ ಸರಕಾರಿ ಸಂಸ್ಥೆಯಾಗಿ ಬೆಳೆದು ನಿಂತಿದೆ. ಗ್ರಾಮಾಂತರ ಮತ್ತು ಹಿಂದುಳಿದ ಪ್ರದೇಶಗಳಲ್ಲಿನ ಜನಸಾಮಾನ್ಯರ ಆರ್ಥಿಕ ಸಂಕಷ್ಟಕ್ಕೆ ಒಂದು ಮುಲಾಮು ಎನ್ನುವ ರೀತಿಯಲ್ಲಿ ಬೆಳೆದು ನಿಂತಿರುವುದು ಕಂಡುಬರುತ್ತಿದೆ. ಗ್ರಾಮೀಣ ಪ್ರದೇಶದ ಏಳಿಗೆಯಲ್ಲಿ ಈ ಸೌಲಭ್ಯವು ಅತ್ಯವಶ್ಯವಾಗಿತ್ತು. ಅಲ್ಲಿ ವಾಸಿಸುವ ಬಡಜನರು ಈ ನೂತನ ಪ್ರಯೋಗಕ್ಕೆ ಹೊಂದಿಕೊಳ್ಳಲಾರರು ಎಂದು ಭಾವಿಸಲಾಗಿತ್ತು. ಆದರೆ ಕಾಲ ಬದಲಾದಂತೆ, ನಮ್ಮನ್ನಾಳುವ ಸರಕಾರಗಳು ಸಹ ಕಾಲಕ್ಕೆ ತಕ್ಕಂತೆ ಹೊಸ ಹೊಸ ಅಂಚೆ ಯೋಜನೆಗಳು ಜಾರಿಗೆ ತಂದಿದುರ ಫಲ ಶ್ರುತಿಯಾಗಿ ಇಂದು ಜನಸಾಮಾನ್ಯರು ಸಹ ಆರ್ಥಿಕವಾಗಿ ಬಲಿಷ್ಠರಾಗುವಂತೆ ಮತ್ತು ಅಂಚೆ ಕಚೇರಿಗಳು ಸಹ ನಷ್ಟ ಅನುಭವಿಸದಂತೆ ಸಮಪ್ರಮಾಣದಲ್ಲಿ ಸಾಗುವಂತೆ ಆಗಿದೆ.

# SPECIMEN

ಕೇಂದ್ರ ಸರಕಾರದ ಆರ್ಥಿಕ ಯೋಜನೆಗಳು ದೇಶದ ಎಲ್ಲಾ ಭಾಗಕ್ಕೂ ಮತ್ತು ಎಲ್ಲಾ ಕ್ಷೇತ್ರಕ್ಕೂ ತಲುಪಬೇಕೆಂಬ ಉದ್ದೇಶದಿಂದಲೇ ಪಂಚವಾರ್ಷಿಕ ಯೋಜನೆ ಜಾರಿಗೆ ತರಲಾಯಿತು. ಈ ಸಂದರ್ಭದಲ್ಲಿ ಅಂಚೆಕಚೇರಿಗಳ ಸಂಖ್ಯೆಗಷ್ಟೇ ಸೀಮಿತಗೊಂಡಿತು. ಆದರೆ ಅವುಗಳ ಗುಣಮಟ್ಟದ ಕಡೆ ಹೆಚ್ಚಿನ ಗಮನ ಹರಿಸಲಿಲ್ಲ. ಹೀಗಾಗಿ ಆರಂಭದಲ್ಲಿ ಲಾಭವಲ್ಲದ ಮತ್ತು ಗಟ್ಟಿಯಾಗಿ ನಿಲ್ಲುವ ಒಂದು ಸಂಸ್ಥೆಯಾಗಿ ಕಂಡು ಬರಲಿಲ್ಲ. ಆದರೆ ಕಾಲ ಕ್ರಮೇಣ ಸರಕಾರದ ಯೋಜನೆಗಳಲ್ಲಿ ಬದಲಾವಣೆಯಾಗಿ ಮತ್ತು ಆಧುನಿಕತೆಯ ಸ್ಪರ್ಶದಿಂದ ಸದ್ಯದ ಪರಿಸ್ಥಿತಿಯಲ್ಲಿ ಒಂದು ಲಾಭದಾಯಕ ಸಂಸ್ಥೆಯಾಗಿ ಬೆಳೆದು ನಿಂತಿದೆ.

ಸ್ವತಂತ್ರಗೊಂಡ ಸಂದರ್ಭದಲ್ಲಿ ಮೈಲುಗಟ್ಟಲೆ ಅಂತರದಲ್ಲಿ ಅಂಚೆ ಕಚೇರಿಗಳಿದ್ದವು. ಜನಸಾಮಾನ್ಯರಿಗೆ ಇದರ ಮಹತ್ವ ಅಷ್ಟೇನು ಆಗಿರಲಿಲ್ಲ. ಹೀಗಾಗಿ ಅಂಚೆ ಕಚೇರಿಗಳು ಎಷ್ಟೋ ವರ್ಷಗಳವರೆಗೆ ಅಪರಿಚಿತವಾಗಿಯೇ ಉಳಿದವು. ಆದರೆ ಜಾಗತೀಕರಣದ ಪ್ರಭಾವ ಎನ್ನುವಂತೆ ಇತ್ತೀಚಿನ ಏಳೆಂಟು ವರ್ಷಗಳಲ್ಲಿ ಇಡೀ ಅವುಗಳ ಸೇವೆಗಳು ಬೇಕಾಗುತ್ತವೆ. ಆದರೆ ಕೆಲವು ಜನರಿಗೆ ಸಾಧಾರಣ ಸೇವೆಗಳ ಜೊತೆಗೆ ವಿಶೇಷ ಸೌಲಭ್ಯಗಳು ಬೇಕಾಗುತ್ತವೆ. ಬಡವರು, ಅಸ್ಪೃಶ್ಯರು, ಆದಿವಾಸಿಗಳು, ಮನೋವಿಕಲರು, ದೈಹಿಕ ರೋಗಿಗಳು, ಅವಿವಾಹಿತರು, ತಬ್ಬಲಿಗಳು, ವಯಸ್ಸಾದವರು, ಹಾದಿ ತಪ್ಪಿದ ಮಕ್ಕಳು ಮುಂತಾದವರಿಗೆ ಹೆಚ್ಚಿನ ಸೇವಾ ಕಾರ್ಯಗಳು ಹಿಂದಿನಿಂದಲೂ ಕುಟುಂಬ, ಬಳಗ, ಜಾತಿ, ಗ್ರಾಮ ಮುಂತಾದ ಘಟಕಗಳಿಂದ ನೆರವೇರುತ್ತಿದ್ದವು. ಆದರೆ ಆಧುನಿಕ ಕಾಲದಲ್ಲಿ ಬೇರೆಯೇ ಆದ ಔಪಚಾರಿಕ ವ್ಯವಸ್ಥೆಗಳು ಬೇಕಾಗುತ್ತವೆ. ಇಂಥ ವ್ಯವಸ್ಥೆಗಳ ಆರಂಭ ಬ್ರಿಟಿಷರ ಕಾಲದಲ್ಲಿ ಆಯಿತು.

ಅಂದಿನ ಸರ್ಕಾರವು ಕ್ರೈಸ್ತ ಮಿಶನರಿಗಳೂ ಸಮಾಜ ಸೇವಾಕಾರ್ಯಗಳನ್ನು ವ್ಯವಸ್ಥೆಗೊಳಿಸಿದರು. ಸರ್ಕಾರವು ಆಡಳಿತಕ್ಕೆ ಅನುಕೂಲವಾಗಲೆಂದು. ಪಾಶ್ಚಾತ್ಯ ಸಂಸ್ಕೃತಿಯ ಪ್ರಚಾರಕ್ಕೆಂದೂ ಅನೇಕ ಸುಧಾರಣಾ ಕಾಯ್ದೆಗಳನ್ನು ಜಾರಿಗೆ ತಂದರು. ವಿಧವಾ ವಿವಾಹವನ್ನು ಪುರಸ್ಕರಿಸಿದುದು. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಒಂದೇ ಎಂಬುದನ್ನು ಸಾರಿದರು.

ಇದರಿಂದ ಇದುವರೆಗೂ ನಿರ್ಲಕ್ಷಿಸಲ್ಪಟ್ಟ ಜನರಿಗೆ ಹೊಸ ಚೈತನ್ಯ ಬಂತು. ನವೀರ ದೃಷ್ಟಿ ದೊರಕಿತು. ಅವರ ಸಾಮಾಜಿಕ ಜೀವನದಲ್ಲಿ ಮಹತ್ತರವಾದ ಬದಲಾವಣೆಗಳಾದವು. ಕೀಳು ಕಾಲದವರಿಗೂ, ಉಚ್ಛ ಜಾತಿಯವರಿಗೂ ಇದ್ದ ಕಂದಕಕ್ಕೆ ಸೇತುವೆಯು ದೊರಕಿತು. ಹಲವು ಏಳು–ಬೀಳುಗಳ ಮಧ್ಯೆ ಹಳತಾದ ಸಂಸ್ಕೃತಿ ಎಂಬ ಕೊಂಡಿಯು ಹೊಸದರ ಜೊತೆಗೆ ತಳುಕು ಹಾಕಿಕೊಂಡು ಒಂದೆಡೆ ಅಳಿಸಿ ಹೋಗದೆ, ಹೊಸದರ ಜೊತೆ ಸೇರಿಕೊಂಡು ಉಳಿದುಕೊಂಡು ಬೆಳೆದುಕೊಂಡು ಬರುತ್ತಿದೆ.

# SPECIMEN

ಶೀರ್ಷಿಕೆ /Title ..........................................................................

ಸಂಕ್ಷಿಪ್ತ ಲೇಖನಕ್ಕಾಗಿ ಸ್ಥಳ / Space for Précis Writing

| | | | | |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

No. of Words Used :
ಉಪಯೋಗಿಸಿದ ಪದಗಳ ಸಂಖ್ಯೆ :

# SPECIMEN

4. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿ. [25]

Women liberation and women empowerment is a global issue this issue was discussed in India before independence also in the Democratic process liberation and women empowerment will be given primary importance. The main development independence, equality, status and rights and creating awareness on the actual duties and responsibilities will be the first phase in women liberation. During the time of Vedas men and women were given equal importance. During the period of historical literature women was given the adorable status. During the Puranik age and following religious rules women were treated social disease the status of women declined child marriage, abolition of widow remarriage, sati system, parada system, Devadasi system, joint family, caste system and stringent religious rules and practices were the main reason for the decline of status of women in the society.

During the period of British rule the western life style and education values in fluenced the life of Indian Citizens and it charged the life style of the Indians many women favour leaders social reformation activities were undertaken in order to destroy the women in the Quality and were successful in their fight. After 1919 women entered the political sector. After which the social status of womens started to get better.

After India becoming independent the Indian Constitution for the welfare of helpless and harassed women for providing their basic rights and independence and to reform the status in the society the cabinet implemented the many law time to time and also implemented constitutional amendment. It has been mentioned in the India which denotes the equality of women-men cooperation and responsibilities unified civilisation.

SPECIMEN

SECTION - B / ವಿಭಾಗ – B

ಪತ್ರ ಲೇಖನ [10]

5. ಈ ಕೆಳಗಿನ ವಿಷಯವನ್ನು ಕುರಿತು 100 ಪದಗಳಿಗೆ ಮೀರದಂತೆ ಇತ್ತೀಚೆಗೆ ಸರಕಾರ ಬಸ್ ದರ ಮತ್ತು ವಿದ್ಯುತ್ ದರ ಹೆಚ್ಚಿಸಿರುವುದರ ಕುರಿತು ದಿನಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

ಬಸ್ ದರ ಮತ್ತು ವಿದ್ಯುತ್ ದರ ಹೆಚ್ಚಿಸಿರುವುದರ ಕುರಿತು.

ವಿಶೇಷ ಸೂಚನೆ :

(ಗೆ, ವಿಳಾಸ – ಸಂಪಾದಕರು, ಕನ್ನಡ ದಿನಪತ್ರಿಕೆ, ರಾಜಭವನ ರಸ್ತೆ, ಬೆಂಗಳೂರು,

(ಇಂದ, ವಿಳಾಸ – XXX ಸಂಖ್ಯೆ 1, YYY ರಸ್ತೆ, ZZZ – ಸ್ಥಳ) – ಕಾಲ್ಪನಿಕವಾಗಿ ನೀಡಲಾಗಿರುವ ಈ ಮೇಲಿನ ವಿಳಾಸಗಳನ್ನಷ್ಟೇ ಬಳಸಿ, ಪತ್ರ ಬರೆಯಲು ಸೂಚಿಸಿದೆ. ಇದರ ಹೊರತಾಗಿ ಬೇರೆ ಯಾವುದೇ ಹೆಸರನ್ನಾಗಲೀ, ವಿಳಾಸವನ್ನಾಗಲೀ, ಸಹಿಯನ್ನಾಗಲೀ ಪತ್ರ ಲೇಖನದಲ್ಲಿ ಬರೆಯಬಾರದು. ಈ ರೀತಿಯ ಯಾವುದೇ ನಮೂದು ಬರೆದಲ್ಲಿ ಪ್ರಶ್ನೆ ಸಹಿತ ಉತ್ತರ ಪತ್ರಿಕೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು ಮತ್ತು "ದುರಾಚಾರ ಪ್ರಕರಣ" ಎಂದು ಪರಿಗಣಿಸಿ ಅಭ್ಯರ್ಥಿತ್ವವನ್ನು ರದ್ದುಗೊಳಿಸುವುದಲ್ಲದೆ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಅಭ್ಯರ್ಥಿಯು ಒಳಗಾಗಬೇಕಾಗುತ್ತದೆ.)

SPECIMEN

6. ಈ ಕೆಳಗಿನ ಎರಡು ಗಾದೆಗಳಿಗೆ ಅರ್ಥಸ್ವಾರಸ್ಯ ವಿವರಿಸಿ. [2 × 5 = 10]

(a) ಮನೆಗೆ ಮಾರಿ ಹೆರರಿಗೆ ಉಪಕಾರಿ.

(b) ಮನವೇ ಗಂಗೆ, ಮನವೇ ಕಾಶಿ.

7. ಈ ಕೆಳಗಿನ ನುಡಿಗಟ್ಟುಗಳಿಗೆ ಅರ್ಥ ವಿವರಿಸಿ. ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ. [2 × 3 = 6]

(a) ಇಕ್ಕಳ ಹಾಕು
ಉತ್ತರ :

(b) ಅಗ್ರಪೀಠ
ಉತ್ತರ :

# SPECIMEN

**8.** **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **[4 × 1 = 4]**

**(a)** ರತ್ನತ್ರಯರೆಂದು ಗುರುತಿಸಿ ಹೇಳಿದವನು

**ಉತ್ತರ :**

**(b)** 'ಅರ್ಥಾಂತರ ನ್ಯಾಸ ಪ್ರಿಯ' ಎಂದು ಖ್ಯಾತನಾದವನು?

**ಉತ್ತರ :**

**(c)** 'ಉಪಮಾಲೋಲ' ಎಂದು ಖ್ಯಾತನಾದವನು?

**ಉತ್ತರ :**

**(d)** 2014ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡ ಸಾಹಿತಿ?

**ಉತ್ತರ :**

SPECIMEN

9 ಈ ಕೆಳಗಿನವುಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ : [5 × 1 = 5]

(a) ನಿಶ್ಚಲ
ಉತ್ತರ :

(b) ವಿಸ್ತಾರ
ಉತ್ತರ :

(c) ಮತ್ತಿಕಾ
ಉತ್ತರ :

(d) ತ್ರಿಗುಣ
ಉತ್ತರ :

(e) ಪಕ್ಷ
ಉತ್ತರ :

SPECIMEN

10. ಈ ಕೆಳಗಿನವುಗಳನ್ನು ಬಿಡಿಸಿ ಬರೆಯಿರಿ. [5 × 1 = 5]

(a) ಮುಂಗಾಲು

ಉತ್ತರ :

(b) ಅಂಗಾಲು

ಉತ್ತರ :

(c) ಕಣ್ದೆರೆ

ಉತ್ತರ :

(d) ಚಿಕ್ಕ ಮಗು

ಉತ್ತರ :

(e) ಇಮ್ಮಡಿ

ಉತ್ತರ :

SPECIMEN

11. ಈ ಕೆಳಗಿನವುಗಳಿಗೆ ಅರ್ಥ ಬರೆಯಿರಿ. [5 × 1 = 5]

(a) ಧರಿತ್ರಿ
ಉತ್ತರ :

(b) ಅಶ್ರುಜಲ
ಉತ್ತರ :

(c) ವ್ರಜ
ಉತ್ತರ :

(d) ನರ
ಉತ್ತರ :

(e) ಮಪಕ
ಉತ್ತರ :

# SPECIMEN

12. ಈ ಕೆಳಗಿನವುಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ. [5 × 1 = 5]

(a) ಅರ್ಥ
ಉತ್ತರ :

(b) ಬೀಳು
ಉತ್ತರ :

(c) ಶುದ್ಧ
ಉತ್ತರ :

(d) ಕ್ರೋಧ
ಉತ್ತರ :

(e) ಅಡಂಬರ
ಉತ್ತರ :